## ತಾತಾ ಅಲ್ಲ ಅಪ್ಪ!

ಗೆಳೆಯ ಶಂಕರನಿಗೆ ಬಹಳ ಬೇಗನೆ ತಲೆ ತುಂಬಾ ಬಿಳಿ ಕೂದಲು ಬಂದಿತ್ತು. ಅವನ ಮಡದಿ ಕೂದಲಿಗೆ ಬಣ್ಣ ಹಚ್ಚಿಕೊಳ್ಳಲು ಎಷ್ಟು ಒತ್ತಾಯಿಸಿದರೂ ಅವನು ಒಪ್ಪಿರಲಿಲ್ಲ.

ಅವನ ಮಡದಿ ಎರಡನೇ ಮಗುವಿನ ಹೆರಿಗೆಗೆಂದು ಆಸ್ಪತ್ರೆ ಸೇರಿದ್ದಳು. ಮಗುವಿನ ಜನನವಾಗಿ ವಾರ್ಡಿಗೆ ತಂದ ಕೂಡಲೇ ನರ್ಸ್ ಮಗುವನ್ನು ಹೊರಗೆ ತಂದು ಅಲ್ಲೇ ಕೂತಿದ್ದ ಶಂಕರನಿಗೆ ತೋರಿಸಿ,'ನೋಡು ಮರೀ ನಿಮ್ಮ ತಾತನನ್ನು ನೋಡು' ಎಂದಳು. 'ತಾತಾ ಅಲ್ಲಾ ಸಿಸ್ಟರ್ ನಾನು ಆ ಮಗುವಿನ ತಂದೆ' ಎಂದು ಹೇಳಲು ಹೊರಟ ಶಂಕರನಿಗೆ, ಆ ನರ್ಸ್, 'ನಿಮ್ಮ ಮಗಳನ್ನು ನೋಡುವಿರಂತೆ ಬನ್ನಿ' ಎಂದು ಹೇಳಿದಾಗ ಪೆಚ್ಚಾಗಿ ಮಾತನಾಡದೇ ಹಿಂಬಾಲಿಸಿದ. ಒಳಗಡೆ ಹೋದಾಗ ಆ ನರ್ಸ್ ಶಂಕರನ ಮಡದಿಗೆ, 'ನೋಡ್ರೀ, ನಿಮ್ಮ ಮಗ ಅವರ ತಾತನನ್ನು ಜೊತೆಯಲ್ಲಿ ಕರೆದುಕೊಂಡು ಬಂದಿದ್ದಾನೆ' ಎಂದಾಗ ಪೆಚ್ಚಾದ ಆಕೆ, 'ಅವರು ತಾತಾ ಅಲ್ಲಾ ಸಿಸ್ಟರ್, ಈ ಪಾಪೂನ ಅಪ್ಪ' ಎಂದಾಗ ಪೆಚ್ಚಾಗುವ ಸರದಿ ನರ್ಸ್‌ದಾಗಿತ್ತು.



ಕಲೆ: ಗಣೇಶ ಆಚಾರ್ಯ

**ಲಿಂಗದಹಳ್ಳಿ ಚಂದ್ರಶೇಖರ್**

---

## ಕಲಿಯುಗದ ಮಹತ್ವ

ಎಂಜಿನಿಯರಿಂಗ್ ಓದುತ್ತಿದ್ದ ಮಗ ಸೆಮಿಸ್ಟರ್ ಪರೀಕ್ಷೆ ಮುಗಿಸಿ ಮನೆಗೆ ಬಂದಿದ್ದ. ಸಂಜೆ ಅಪ್ಪ ಮತ್ತು ಮಗ ಟೀ ಕುಡಿಯುತ್ತಾ ಲೋಕಾಭಿರಾಮವಾಗಿ ಮಾತನಾಡುತ್ತಾ ಇದ್ದಾಗ ಮಗನಿಗೆ ಒಂದು ವಿಷಯದ ಬಗ್ಗೆ ಅನುಮಾನ ಬಂತು.

ಉತ್ತರಕ್ಕಾಗಿ ಕೂಡಲೇ ತಂದೆಗೆ ಪ್ರಶ್ನೆ ಮಾಡುತ್ತಾ, 'ಅಪ್ಪಾ...ಶ್ರೀರಾಮ ತನ್ನ ತಂದೆ ದಶರಥ ಮಹಾರಾಜನ ಮಾತು ಕೇಳಿ ಕೀರ್ತಿವಂತನಾದ. ಅದೇ ಪ್ರಹ್ಲಾದನು ತನ್ನ ತಂದೆ ಹಿರಣ್ಯಕಶಿಪುವಿನ ಮಾತನ್ನು ಕೇಳದೆಯೇ ಕೀರ್ತಿವಂತನಾದ' ಎಂದು ಹೇಳುತ್ತಾ ಮುಂದುವರೆದು, 'ಅಪ್ಪಾ ನಾವಿಬ್ಬರೂ ಗೆಳೆಯರಂತೆ ಇದ್ದೇವೆ. ಈಗ ಕೇಳಿ ನಾನು ಕೀರ್ತಿವಂತನಾಗಬೇಕಾದರೆ ನಿಮ್ಮ ಮಾತನ್ನು ಕೇಳಬೇಕೋ...ಬೇಡವೋ? ಎಂದ.

ಆಗ ತಂದೆಯು ಅಷ್ಟೇ ಶಾಂತವಾಗಿ ತಾರ್ಕಿಕವಾಗಿ 'ನೋಡು ಮಗನೇ. ಇದು ಸತ್ಯಯುಗವೂ ಅಲ್ಲಾ.. ತ್ರೇತಾಯುಗವೂ ಅಲ್ಲಾ... ನಾವಿಬ್ಬರೂ ಇಂದು ಕಲಿಯುಗದಲ್ಲಿ ಇದ್ದೇವೆ. ಹಾಗಾಗಿ ನಾವಿಬ್ಬರೂ ನಿನ್ನ ಅಮ್ಮನ ಮಾತನ್ನು ಕೇಳಬೇಕು ಆಗ ಮಾತ್ರ ನೆಮ್ಮದಿ ಕೀರ್ತಿ ಎಲ್ಲವೂ ಸಿಗುತ್ತದೆ' ಎಂದಾಗ ಅಪ್ಪನ ಉತ್ತರಕ್ಕೆ ಮಗ ಶಾಕ್!



**ಜಯಮಾಲಾ ಪೈ**